1164 (2) ಶ್ರೀ ಜಯಪ್ರಕಾಶ್ ಹೆಗ್ಡೆ ಕೆ. (ಬ್ರಹ್ಮಾವರ) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ಸರ್ಕಾರಿ ಆಸ್ಪತ್ರೆಗಳಿಗೆ ಸರಬರಾಜು ಮಾಡಲಾಗುವ ಔಷಧಿಗಳನ್ನು ಖರೀದಿ ಮಾಡಲು ಇಲಾಖೆ ಅನುಸರಿಸುತ್ತಿರುವ ನಿಯಮಗಳು ಯಾವುವು ;

ಆ) ಔಷಧಿ ಸರಬರಾಜು ವ್ಯವಸ್ಥೆಯಲ್ಲಿರುವ ಹಲವಾರು ನ್ಯೂನ್ಯತೆಗಳು ಸರ್ಕಾರದ ಗಮನಕ್ಕೆ ಬಂದಿವೆಯೇ ;

ಇ) ಬಂದಿದ್ದಲ್ಲಿ ಇದಕ್ಕೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು ;

ಈ) ಜಿಲ್ಲಾ ಪಂಚಾಯತ್ ಹಾಗೂ ಆರೋಗ್ಯ ಇಲಾಖೆಯು ಯಾವ ಪ್ರಮಾಣದಲ್ಲಿ ಔಷಧಿಗಳನ್ನು ಖರೀದಿಸಿ ಜಿಲ್ಲೆಗಳಿಗೆ ಸರಬರಾಜು ಮಾಡುತ್ತಿವೆ : (ಜಿಲ್ಲಾ ಪಂಚಾಯತ್‌ವಾರು ವಿವರಗಳನ್ನು ನೀಡುವುದು) ?

ಶ್ರೀ ಎನ್. ಚಲುವರಾಯಸ್ವಾಮಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಅತ್ಯವಶ್ಯಕವಾಗಿ ಬೇಕಾದ ಔಷಧಿ ಪಟ್ಟಿ ಸಿದ್ದಪಡಿಸಿದ ನಂತರ ಅದನ್ನು ರಾಜ್ಯ ಮಟ್ಟದ ಥೆರಪೆಟಿಕ್ ಕಮಿಟಿ ಮುಂದೆ ಮಂಡಿಸಿ, ಅನುಮೋದನೆ ಪಡೆದು ಟೆಂಡರ್ ಮೂಲಕ ದರಗುತ್ತಿಗೆ ನಿಗದಿಪಡಿಸಲಾಗುವುದು. ನಂತರದಲ್ಲಿ ಆಸ್ಪತ್ರೆಗಳ ಬೇಡಿಕೆಗನುಗುಣವಾಗಿ ಔಷಧಿ ಸರಬರಾಜು ಮಾಡಲಾಗುವುದು.

ಆ) ಬಂದಿಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಜಿಲ್ಲಾ ಪಂಚಾಯತ್ ವ್ಯಾಪ್ತಿಯ 27 ಜಿಲ್ಲೆಗಳಲ್ಲಿನ ಆರೋಗ್ಯ ಸಂಸ್ಥೆಗಳಿಗೆ ಸರ್ಕಾರಿ ಔಷಧಿ ಮಳಿಗೆ ಅನುದಾನದಲ್ಲಿನ ಶೇ. 40 ರಷ್ಟು ಭಾಗದ ಮೌಲ್ಯದ ಔಷಧಿಗಳನ್ನು ಈ ಮಳಿಗೆಯಿಂದ ಬೇಡಿಕೆಯಂತೆ ನೇರವಾಗಿ ಸರಬರಾಜು ಮಾಡಲಾಗುವುದು. ಜಿಲ್ಲಾ ಪಂಚಾಯತ್ ವಲಯದ ಈ ಆರೋಗ್ಯ ಸಂಸ್ಥೆಗಳಿಗೆ ಲಿಂಕ್ ಡಾಕ್ಯುಮೆಂಟ್‌ನಲ್ಲಿ ನಿಗದಿಗೊಳಿಸಿರುವ ಶೇ. 60 ರ ಮೌಲ್ಯಕ್ಕೆ ಎಲ್ಲಾ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಔಷಧಿ ಖರೀದಿ ಮಾಡುತ್ತಾರೆ.

1165 (761) ಶ್ರೀ ಜೀವರಾಜ್ ಡಿ.ಎನ್. (ಶೃಂಗೇರಿ) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ಶೃಂಗೇರಿ ಕ್ಷೇತ್ರದ ನರಸಿಂಹರಾಜಪುರ, ಕೊಪ್ಪ ಹಾಗೂ ಶೃಂಗೇರಿಗಳಲ್ಲಿ ಮಾರ್ಚ್ ಅಂತ್ಯದ ವೇಳೆಗೆ ಇದ್ದ ಪ್ರಾಥಮಿಕ ಹಾಗೂ ಪ್ರೌಢ ಶಾಲಾ ಶಿಕ್ಷಕರ ಹುದ್ದೆಗಳು ಎಷ್ಟು (ತಾಲ್ಲೂಕುವಾರು ಹಾಗೂ ಶಾಲಾವಾರು ವಿವರ ನೀಡುವುದು) ;

ಆ) ಏಪ್ರಿಲ್‌ನಿಂದ ಇದುವರೆಗೆ ಈ ಸ್ಥಳಗಳಿಂದ ಬೇರೆಡೆಗೆ ವರ್ಗಾವಣೆಗೊಂಡ ಮತ್ತು ಈ ಸ್ಥಳಗಳಿಗೆ ಬೇರೆಡೆಯಿಂದ ವರ್ಗಾವಣೆಯಾಗಿ ಬಂದ ಶಿಕ್ಷಕರ ಸಂಖ್ಯೆ ಎಷ್ಟು ತಾಲ್ಲೂಕುವಾರು, ಶಾಲಾವಾರು ವಿವರ ನೀಡುವುದು ;

ಇ) ದೊಡ್ಡ ಸಂಖ್ಯೆಯಲ್ಲಿ ಶಿಕ್ಷಕರ ಹುದ್ದೆ ಖಾಲಿ ಇದ್ದರೂ ಬದಲಿ ಶಿಕ್ಷಕರನ್ನು ನೇಮಿಸದೆ ವರ್ಗಾವಣೆ ಮಾಡುತ್ತಿರುವುದರಿಂದ ಮಕ್ಕಳ ವಿದ್ಯಾಭ್ಯಾಸಕ್ಕೆ ತೊಂದರೆ ಆಗುವುದೆಂದು ಸರ್ಕಾರ ಭಾವಿಸಿಲ್ಲವೇ ;

ಈ) ಹಾಗಿದ್ದಲ್ಲಿ, ಈ ರೀತಿ ವರ್ಗಾವಣೆ ಮಾಡಲು ಕಾರಣಗಳೇನು ;

ಉ) ಈ ಶಿಕ್ಷಕರ ಹುದ್ದೆಗಳನ್ನು ಕಾಲಮಿತಿಯೊಳಗೆ ತುಂಬಲು ಸರ್ಕಾರ ಕ್ರಮ ಕೈಗೊಳ್ಳುವುದೇ (ವಿವರ ನೀಡುವುದು) ?

ಶ್ರೀ ರಾಮಲಿಂಗರೆಡ್ಡಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) ತಾಲ್ಲೂಕು

	ಪ್ರಾಥಮಿಕ ಶಾಲೆ (ಪಟ್ಟಿ ಲಗತ್ತಿಸಿದೆ)		ಪ್ರೌಢಶಾಲೆ (ಪಟ್ಟಿ ಲಗತ್ತಿಸಿದೆ)	
	ಮಾರ್ಚ್ ಅಂತ್ಯದವರೆಗೆ ಮಂಜೂರಾದ ಹುದ್ದೆಗಳು	ಖಾಲಿ ಹುದ್ದೆಗಳು	ಮಂಜೂರಾದ ಹುದ್ದೆಗಳು	ಖಾಲಿ ಹುದ್ದೆಗಳು
ನ.ರಾಜಪುರ	417	57	80	12
ಕೊಪ್ಪ	524	99	119	13
ಶೃಂಗೇರಿ	278	53	50	05
ಒಟ್ಟು	1219	209	249	30

ಅ) ತಾಲ್ಲೂಕು

	ಪ್ರಾಥಮಿಕ ಶಾಲೆ			ಪ್ರೌಢಶಾಲೆ	
	ವರ್ಗಾವಣೆ ಗೊಂಡಿದ್ದು	ಬೇರೆ ಕಡೆಯಿಂದ ಬಂದವರು	ಬಿಡುಗಡೆ ಯಾಗದಿರುವುದು	ವರ್ಗಾವಣೆ ಗೊಂಡು ಬೇರೆ ಕಡೆ ಹೋಗಿರುವುದು	ಬೇರೆ ಕಡೆಯಿಂದ ಬಂದಿರುವುದು
ನ.ರಾಜಪುರ	16	10	02	01	01
ಕೊಪ್ಪ	09	05	10	01	01
ಶೃಂಗೇರಿ	09	03	07	–	01

ಇ) ಸರ್ಕಾರಿ ಸುತ್ತೋಲೆ ಸಂಖ್ಯೆ: ಇಡಿ 1078 ಇಟಿಆರ್ 2004 ದಿನಾಂಕ 24–12–2004 ರನ್ವಯ ವರ್ಗಾವಣೆಗಳನ್ನು ಸ್ಥಗಿತಗೊಳಿಸಲಾಗಿದೆ.

ಈ) ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಉ) ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳಲ್ಲಿ ಖಾಲಿ ಇರುವ ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡಲು ಪರಿಶೀಲಿಸುತ್ತಿದ್ದು, ಸದರಿ ಖಾಲಿ ಹುದ್ದೆಗಳನ್ನು ಮುಂದಿನ ನೇಮಕಾತಿಯಲ್ಲಿ ಭರ್ತಿ ಮಾಡಲು ಕ್ರಮ ತೆಗೆದುಕೊಳ್ಳಲಾಗುವುದು.

ಚಿಕ್ಕಮಗಳೂರು ಜಿಲ್ಲೆಯ ಶೃಂಗೇರಿ ಕ್ಷೇತ್ರದ ನ.ರ. ಪುರ, ಕೊಪ್ಪ ಹಾಗೂ ಶೃಂಗೇರಿ ತಾಲ್ಲೂಕುಗಳಲ್ಲಿ ಮಾರ್ಚಿ ಅಂತ್ಯದ ವೇಳೆಗೆ ಇದ್ದ ಪ್ರೌಢಶಾಲಾ ಹುದ್ದೆಗಳು ತಾಲ್ಲೂಕುವಾರು (ಮಾರ್ಚ್ ಅಂತ್ಯದವರೆಗೆ ಮಂಜೂರಾದ ಹುದ್ದೆಗಳು, ಖಾಲಿ ಹುದ್ದೆಗಳು)

ಜಿಲ್ಲೆ: ಚಿಕ್ಕಮಗಳೂರು

ತಾಲ್ಲೂಕು	ಕ್ರ. ಸಂ	ಶಾಲೆಯ ಹೆಸರು	ಮಂಜೂರಾದ ಹುದ್ದೆಗಳು	ಖಾಲಿ ಹುದ್ದೆಗಳು
ಶೃಂಗೇರಿ	01.	ಸರ್ಕಾರಿ ಪದವಿ ಪೂರ್ವ ಕಾಲೇಜು, ಶೃಂಗೇರಿ	20	1 (ಸಂಗೀತ)
	02.	ಸರ್ಕಾರಿ ಪದವಿ ಪೂರ್ವ ಕಾಲೇಜು, ಬೇಗಾರು	09	1 (ತೋಟಗಾರಿಕೆ)
	03.	ಸರ್ಕಾರಿ ಪ್ರೌಢಶಾಲೆ, ಹೊರೆಹಡ್ಲು	09	1 (ಕಲಾ)
	04.	ಸರ್ಕಾರಿ ಪ್ರೌಢಶಾಲೆ, ನೆಮ್ಮಾರು	09	1 (ಆಂಗ್ಲ)
	05.	ಸರ್ಕಾರಿ ಪ್ರೌಢಶಾಲೆ, ಹೊಳೆಕೊಪ್ಪ	09	1 (ತೋಟಗಾರಿಕೆ)
		ಒಟ್ಟು	56	05
ಕೊಪ್ಪ	01.	ಸರ್ಕಾರಿ ಪದವಿ ಪೂರ್ವ ಕಾಲೇಜು, ಕೊಪ್ಪ	29	2 ಕಲಾ, ತೋಟ
	02.	ಸರ್ಕಾರಿ ಪದವಿ ಪೂರ್ವ ಕಾಲೇಜು, ಕಮ್ಮರಡಿ	17	1 ಚಿತ್ರಕಲೆ
	03.	ಸರ್ಕಾರಿ ಪ್ರೌಢಶಾಲೆ, ಅಗಳಗಂಡಿ	12	1 ಹೊಲಿಗೆ
	04.	ಸರ್ಕಾರಿ ಪ್ರೌಢಶಾಲೆ, ಬಮ್ಮಂಜೆ	11	2 ತೋಟ, ಆಂಗ್ಲ
	05.	ಸರ್ಕಾರಿ ಪ್ರೌಢಶಾಲೆ, ಮೊಮ್ಮಲಾಪುರ	09	1 ತೋಟಗಾರಿಕೆ
	06.	ಸರ್ಕಾರಿ ಪ್ರೌಢಶಾಲೆ, ಹೇರೂರು	08	01 ಕನ್ನಡ
	07.	ಸರ್ಕಾರಿ ಪ್ರೌಢಶಾಲೆ, ಕುದ್ರೆಗುಂಡಿ	12	1 ಕನ್ನಡ
	08.	ಸರ್ಕಾರಿ ಪ್ರೌಢಶಾಲೆ, ನಿಲುವಾಗಿಲು	11	1 ಚಿತ್ರಕಲೆ
	09.	ಸರ್ಕಾರಿ ಪ್ರೌಢಶಾಲೆ, ಶಾಂತಿ ಗ್ರಾಮ	10	3 ಹಿಂ, ವಿಜ್ಞಾನ, ಆಂಗ್ಲ
		ಒಟ್ಟು (ಬೋಧಕೇತರ ಸೇರಿ)	119	13
ನ.ರಾ. ಪುರ	01.	ಸರ್ಕಾರಿ ಪದವಿ ಪೂರ್ವ ಕಾಲೇಜು, ನ.ರಾ. ಪುರ	18	0
	02.	ಸ.ಪದವಿ ಪೂರ್ವ ಕಾಲೇಜು, ಮುತ್ತಿನಕೊಪ್ಪ	11	2 ಕನ್ನಡ, ತೋಟಗಾರಿಕೆ
	03.	ಸರ್ಕಾರಿ ಪ್ರೌಢಶಾಲೆ, ಬೆಳ್ಳೂರು	10	3 ಹಿಂದಿ, ವಿಜ್ಞಾನ, ಕಲೆ

04.	ಸರ್ಕಾರಿ ಪ್ರೌಢಶಾಲೆ, ಗಡಿಗೇಶ್ವರ	09	2 ಚಿತ್ರ, ವಿಜ್ಞಾನ
05.	ಸರ್ಕಾರಿ ಪ್ರೌಢಶಾಲೆ, ಮಾಗುಂಡಿ	10	1 ಕನ್ನಡ
06.	ಸರ್ಕಾರಿ ಪ್ರೌಢಶಾಲೆ, ಬಾಳೆಹುನ್ನೂರು	10	2 ಹಿಂದಿ, ಹೊಲಿಗೆ
07.	ಸರ್ಕಾರಿ ಪ್ರೌಢಶಾಲೆ, ಮೇಲ್ಬಾಲ್	12	2 ಮು.ತಿ. ತೋಟ
	ಒಟ್ಟು (ಬೋಧಕೇತರ ಸೇರಿ)	80	12

ಪ್ರಶ್ನೆ ಸಂಖ್ಯೆ–761

ಶ್ರೀ ಡಿ.ಎನ್.ಜೀವರಾಜ್, ಮಾನ್ಯ ಶಾಸಕರು, ಶೃಂಗೇರಿ ಕ್ಷೇತ್ರ

ಪ್ರಶ್ನೆ : ಏಪ್ರಿಲ್‌ನಿಂದ ಇದುವರೆಗೆ ಈ ಸ್ಥಳದಿಂದ ಬೇರೆ ಕಡೆಗೆ ವರ್ಗಾವಣೆಗೊಂಡ ಹಾಗೂ ಬೇರೆ ಕಡೆಯಿಂದ ವರ್ಗಾವಣೆಯಾಗಿ ಬಂದ ಶಿಕ್ಷಕರ ಸಂಖ್ಯೆ ಎಷ್ಟು?

ಕ್ರಮ. ಸಂಖ್ಯೆ	ತಾಲ್ಲೂಕು	ಬಂದಿರುವ ಶಿಕ್ಷಕರು	ವರ್ಗಾವಣೆಯಾಗಿ ಹೋಗಿರುವ ಶಿಕ್ಷಕರು
		02	03
01.	ಶೃಂಗೇರಿ	–	ಸರ್ಕಾರಿ ಪ್ರೌಢಶಾಲೆ, ನೆಮ್ಮಾರು
02.	ಕೊಪ್ಪ	ಸರ್ಕಾರಿ ಪ್ರೌಢಶಾಲೆ, ಬೊಮ್ಮಲಾಪುರ	ಸರ್ಕಾರಿ ಪ್ರೌಢಶಾಲೆ, ಮೊಮ್ಮಲಾಪುರ
03.	ನ.ರಾ. ಪುರ	ಸರ್ಕಾರಿ ಪ್ರೌಢಶಾಲೆ, ಬೆಳ್ಳೂರು (ನೇಮಕಾತಿ)	ಸ. ಪದವಿ ಪೂರ್ವ ಕಾಲೇಜು, ನ.ರಾ. ಪುರ

1166 (1619) ಶ್ರೀ ಜೀವರಾಜ ಡಿ.ಎನ್. (ಶೃಂಗೇರಿ) ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ಕೊಪ್ಪ, ನರಸಿಂಹರಾಜಪುರ ಹಾಗೂ ಶೃಂಗೇರಿ ತಾಲ್ಲೂಕುಗಳಲ್ಲಿ ಸರ್ಕಾರಿ ಕಾಲೇಜುಗಳಲ್ಲಿರುವ ಅಧ್ಯಾಪಕರ ಖಾಲಿ ಹುದ್ದೆ ಎಷ್ಟು (ಕಾಲೇಜುವಾರು ವಿವರ ನೀಡುವುದು) ;

ಆ) ಇತ್ತೀಚೆಗೆ ಕೊಪ್ಪ ಸರ್ಕಾರಿ ಕಾಲೇಜಿನಿಂದ ಅಧ್ಯಾಪಕರನ್ನು ವರ್ಗಾವಣೆ ಮಾಡಿರುವುದು ನಿಜವೇ ; ಎಷ್ಟು ಅಧ್ಯಾಪಕರನ್ನು ವರ್ಗಾವಣೆ ಮಾಡಲಾಗಿದೆ ;

ಇ) ಶೈಕ್ಷಣಿಕ ವರ್ಷದ ಮಧ್ಯದಲ್ಲಿ ಬದಲಿ ಅಧ್ಯಾಪಕರನ್ನು ನೇಮಿಸದೇ ವರ್ಗಾವಣೆ ಮಾಡುವುದರಿಂದ ವಿದ್ಯಾರ್ಥಿಗಳಿಗೆ ತೊಂದರೆಯಾಗುವುದು ಸರ್ಕಾರದ ಗಮನಕ್ಕೆ ಬಂದಿದೆಯೇ :

ಈ) ಹಾಗಿದ್ದಲ್ಲಿ, ಅಧ್ಯಾಪಕರನ್ನು ನೇಮಿಸಲು ಸರ್ಕಾರದ ಕ್ರಮಗಳೇನು ?

ಶ್ರೀ ಡಿ. ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು) :

ಅ) ಕೊಪ್ಪ ಸರ್ಕಾರಿ ಕಾಲೇಜಿನಲ್ಲಿ ಕನ್ನಡ, ಆಂಗ್ಲಭಾಷೆ ಹಾಗೂ ಎಲೆಕ್ಟ್ರಾನಿಕ್ಸ್ ಹುದ್ದೆಗಳು ಖಾಲಿ ಇರುತ್ತವೆ ಹಾಗೂ ನರಸಿಂಹರಾಜಪುರ ಸರ್ಕಾರಿ ಕಾಲೇಜಿನಲ್ಲಿ ಕನ್ನಡ ಉಪನ್ಯಾಸಕರ ಹುದ್ದೆ ಖಾಲಿ ಇದೆ. ಶೃಂಗೇರಿ ತಾಲ್ಲೂಕಿನಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿ ಇರುವುದಿಲ್ಲ.

ಆ) ವರ್ಗಾವಣೆ ಮಾಡಿರುವುದು ನಿಜ. ಕೊಪ್ಪ ಸರ್ಕಾರಿ ಕಾಲೇಜಿನಲ್ಲಿ ಒಟ್ಟು 5 ಉಪನ್ಯಾಸಕರ ವರ್ಗಾವಣೆ ಮಾಡಲಾಗಿದೆ.